ಪತ್ರಿಕಾ ತುಣುಕುಗಳು PAPER CLIPPINGS
ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 5/12/19

### ಐಎನ್‌ಎಕ್ಸ್ ಮೀಡಿಯಾ ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಪಾಲಾಗಿದ್ದ ಕೇಂದ್ರದ ಮಾಜಿ ಸಚಿವರಿಗೆ ತುಸು ನಿರಾಳ

# 106 ದಿನ ಸೆರೆವಾಸ ಬಳಿಕ ಚಿದಂಬರಂಗೆ ಬಿಡುಗಡೆ ಭಾಗ್ಯ

**ನವದೆಹಲಿ:** ಐಎನ್‌ಎಕ್ಸ್ ಮೀಡಿಯಾ ಹಗರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಹೂಡಿದ್ದ ಹಣಕಾಸು ದುರ್ಬಳಕೆ ಪ್ರಕರಣದಲ್ಲಿ ಕೇಂದ್ರದ ಮಾಜಿ ಸಚಿವ ಪಿ. ಚಿದಂಬರಂಗೆ ಸುಪ್ರೀಂ ಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ. ಇದೇ ಹಗರಣದಲ್ಲಿ ಕೇಂದ್ರ ತನಿಖಾ ದಳ (ಸಿಬಿಐ) ಹೂಡಿದ್ದ ಭ್ರಷ್ಟಾಚಾರ ಮೊಕದ್ದಮೆಯಲ್ಲಿ ಈ ಹಿಂದೆಯೇ ಅವರಿಗೆ ಜಾಮೀನು ಸಿಕ್ಕಿತ್ತು. ಈ ಮೂಲಕ 106 ದಿನಗಳ ಸೆರೆವಾಸ ಅಂತ್ಯವಾದಂತಾಗಿದೆ. ಬುಧವಾರ ರಾತ್ರಿ 8 ಗಂಟೆ ವೇಳೆ ಅವರು ಜೈಲಿನಿಂದ ಬಿಡುಗಡೆ ಹೊಂದಿದ್ದಾರೆ.

» **ರಾತ್ರಿ 8 ಗಂಟೆ ವೇಳೆ ಜೈಲಿನಿಂದ ಬಿಡುಗಡೆ ಹೊಂದಿದ ಚಿದಂಬರಂ**

ಚಿದಂಬರಂಗೆ ಜಾಮೀನು ನಿರಾಕರಿಸಿದ್ದ ದೆಹಲಿ ಹೈ ಕೋರ್ಟ್‌ನ ನವೆಂಬರ್ 15ರ ಆದೇಶವನ್ನು ತಳ್ಳಿಹಾಕಿದ ಸುಪ್ರೀಂಕೋರ್ಟ್‌ನ ತ್ರಿಸದಸ್ಯ ಪೀಠ, ಹಲವು ಷರತ್ತುಗಳೊಂದಿಗೆ ಜಾಮೀನು ನೀಡಿತು. ನ್ಯಾಯಮೂರ್ತಿ ಆರ್. ಭಾನುಮತಿ ನೇತೃತ್ವದ ಪೀಠದಲ್ಲಿ ನ್ಯಾ. ಎ.ಎಸ್. ಬೋಪಣ್ಣ ಮತ್ತು ನ್ಯಾ. ಹೃಷಿಕೇಶ್ ರಾಯ್ ಇದ್ದರು. ಚಿದಂಬರಂ ಬಿಡುಗಡೆಯಾದರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರಬಹುದು. ಸಾಕ್ಷ್ಯ ನಾಶ ಮಾಡಬಹುದು ಎನ್ನುವ ಕಾರಣಕ್ಕೆ ಜಾಮೀನು ನೀಡಬಾರದೆಂಬ ಇ.ಡಿ ವಾದವನ್ನು ಪೀಠ ತಳ್ಳಿಹಾಕಿತು.

**ಸೋನಿಯಾ ಭೇಟಿ:** ಜೈಲಿನಿಂದ ಬಿಡುಗಡೆಯಾದ ಚಿದಂಬರಂ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮನೆಗೆ ಭೇಟಿ ನೀಡಿದ್ದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಚಿದಂಬರಂ, 106 ದಿನಗಳ ಬಳಿಕ ಮುಕ್ತ ಪರಿಸರದಲ್ಲಿ ನೆಮ್ಮದಿಯಿಂದ ಉಸಿರಾಡುವಂತಾಗಿದೆ ಎಂದರು.




- ಐಎನ್‌ಎಕ್ಸ್ ಮೀಡಿಯಾ ಹಗರಣದ ಭ್ರಷ್ಟಾಚಾರ ಕೇಸ್‌ನಲ್ಲಿ ಆಗಸ್ಟ್ 21ರಂದು ಸಿಬಿಐನಿಂದ ಬಂಧನ.
- ಅದೇ ಹಗರಣದ ಹಣಕಾಸು ದುರ್ಬಳಕೆ ಕೇಸ್‌ನಲ್ಲಿ ಇ.ಡಿ.ಯಿಂದ ಅಕ್ಟೋಬರ್ 16ರಂದು ಬಂಧನ.
- ಸಿಬಿಐ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನಿಂದ ಅಕ್ಟೋಬರ್ 22ರಂದು ಜಾಮೀನು.

## ಸುಪ್ರೀಂ ಷರತ್ತೇನು?

- ಸಾಕ್ಷ್ಯಗಳನ್ನು ನಾಶಮಾಡಬಾರದು.
- ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಅಥವಾ ಅವರನ್ನು ಹೆದರಿಸಲು ಪ್ರಯತ್ನಿಸಬಾರದು.
- ಇ.ಡಿ ಕರೆದಾಗ ವಿಚಾರಣೆಗೆ ಹಾಜರಾಗಬೇಕು.
- ವಿಚಾರಣಾ ನ್ಯಾಯಾಲಯದ ಆದೇಶವಿಲ್ಲದೆ ದೇಶಬಿಟ್ಟು ಹೋಗಬಾರದು.
- ಪ್ರಕರಣಕ್ಕೆ ಸಂಬಂಧಿಸಿ ಮಾಧ್ಯಮಕ್ಕೆ ಯಾವುದೇ ಸಂದರ್ಶನ/ಹೇಳಿಕೆ ನೀಡಬಾರದು.
- ಎರಡು ಲಕ್ಷ ರೂಪಾಯಿ ಬಾಂಡ್, ಅಷ್ಟೇ ಮೊತ್ತದ ಶ್ಯೂರಿಟಿ ಕೊಡಬೇಕು.

## ಇ.ಡಿ ವಾದ ತಿರಸ್ಕರಿಸಿದ ಕೋರ್ಟ್

ಸಾಕ್ಷಿಯೊಬ್ಬರು ಬೇರೆ ರಾಜ್ಯದವರಾಗಿದ್ದು ಅವರು ಕೋರ್ಟ್‌ಗೆ ಬಂದಿಲ್ಲ. ಹೀಗಾಗಿ ಜಾಮೀನು ಅರ್ಜಿಯನ್ನು ಮುಂದೂಡುವಂತೆ ಇ.ಡಿ ಕೋರ್ಟ್‌ಗೆ ಮನವಿ ಮಾಡಿತ್ತು. ಇದನ್ನು ಕೋರ್ಟ್ ತಿರಸ್ಕರಿಸಿತು. ಸಾಕ್ಷಿ ಬರದಿದ್ದಕ್ಕೆ ಚಿದಂಬರಂ ಹೊಣೆಯಲ್ಲ. ಆರ್ಥಿಕ ಅಪರಾಧದ ಈ ಪ್ರಕರಣ ಗಂಭೀರವಾದರೂ ಇಂಥ ಪ್ರತಿಯೊಂದು ಸಂದರ್ಭದಲ್ಲಿ ಆರೋಪಿಗ ಜಾಮೀನು ನಿರಾಕರಿಸಬೇಕೆಂಬ ನಿಯಮವೇನೂ ಕಾನೂನಿನಲ್ಲಿ ಇಲ್ಲ ಎಂದು ಕೋರ್ಟ್ ಹೇಳಿತು.



## ಒಒಬಿಸಿ ಸದಸ್ಯ!

ಪಿ. ಚಿದಂಬರಂ ಕಾಂಗ್ರೆಸ್‌ನ ಒಒಬಿಸಿ (ಜಾಮೀನು ಮೇಲೆ ಹೊರಗಿರುವವರ ಕಾಂಗ್ರೆಸ್ ಕ್ಲಬ್) ಸದಸ್ಯರಾಗಿದ್ದಾರೆ ಎಂದು ಬಿಜೆಪಿ ನಾಯಕ ಸಂಬಿತ್ ಪಾತ್ರ ಟೀಕಿಸಿದ್ದಾರೆ. ಮತ್ತೊಂದೆಡೆ ಕೋರ್ಟ್ ಆದೇಶವನ್ನು ಕಾಂಗ್ರೆಸ್ ಸ್ವಾಗತಿಸಿದೆ.

## ಪ್ರಕರಣವೇನು?

2007ರಲ್ಲಿ ಯುಪಿಎ ಸರ್ಕಾರದಲ್ಲಿ ಚಿದಂಬರಂ ವಿತ್ತ ಸಚಿವರಾಗಿದ್ದಾಗ ಐಎನ್‌ಎಕ್ಸ್ ಮೀಡಿಯಾ ಮಾಧ್ಯಮ ಸಂಸ್ಥೆ 305 ಕೋಟಿ ರೂಪಾಯಿ ವಿದೇಶಿ ಬಂಡವಾಳ ಪಡೆಯಲು ವಿದೇಶಿ ಬಂಡವಾಳ ಹೂಡಿಕೆ ಉತ್ತೇಜನ ಮಂಡಳಿ (ಎಫ್‌ಐಪಿಬಿ) ಅನುಮತಿ ನೀಡಿತ್ತು. ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಸಿಬಿಐ 2017 ಮೇ 15ರಂದು ಚಿದಂಬರಂ ವಿರುದ್ಧ ಕೇಸ್ ದಾಖಲಿಸಿತ್ತು. ಅವರ ಪುತ್ರ ಕಾರ್ತಿ ಕೂಡ ಇದರಲ್ಲಿ ಆರೋಪಿ. ಅನಂತರ, ಇದೇ ಪ್ರಕರಣದಲ್ಲಿ ಹಣಕಾಸು ದುರ್ಬಳಕೆ ತಡೆ ಕಾನೂನಿನ (ಪಿಎಂಎಲ್ಎ) ಅನ್ವಯ ಇ.ಡಿ ಮೊಕದ್ದಮೆ ದಾಖಲಿಸಿತ್ತು. ಐಎನ್‌ಎಕ್ಸ್ ಮೀಡಿಯಾ ಪೀಟರ್ ಮತ್ತು ಇಂದ್ರಾಣಿ ಮುಖರ್ಜೀ ಮಾಲೀಕತ್ವದ ಸಂಸ್ಥೆಯಾಗಿತ್ತು.